**ಸಿಸಿ ನಂ. 1444/2024**

**ಸಿ.ಡಬ್ಲೂ–10 ಪಿ.ಡ್ಲೂ:7**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಶಾಂತಗೌಡ ಬಿರಾದಾರ |
| ತಂದೆ ಹೆಸರು | : | ಮಲ್ಲಿನಾಥ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಖೈನೂರ |

ದಿನಾಂಕ 01–09–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

1. ಚಾ.ಸಾ. 1, 5 ರಿಂದ 8, 9 ರವರ ಪರಿಚಯ ಇದೆ. ಚಾ.ಸಾ. 11 ರಿಂದ 13 ರವರ ಪರಿಚಯ ಇಲ್ಲ. ಮೃತ ವಿಠ್ಠಲ ರವರ ಪರಿಚಯ ಇದೆ. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಆ ದಿನ ನಾನು ಮತ್ತು ಮೃತ ವಿಠ್ಠಲ ಮತ್ತು ಊರಿನವರು ಸೇರಿಕೊಂಡು ಖೈನೂರಗೆ ಟಂ ಟಂ ವಾಹನದಲ್ಲಿ ಹೊಗುತ್ತಿದ್ದಾಗ, ಕುರಿ ಅಡ್ಡ ಬಂದು ಯಂಕಂಚಿ ಹಳ್ಳದ ಸಮೀಪ್ ಟಂ ಟಂ ಪಲ್ಟಿಯಾಗಿರುತ್ತದೆ. ಸದರಿ ಅಪಘಾತದಲ್ಲಿ ನನಗೆ ಸ್ವಲ್ಪ ಪೆಟ್ಟಾಗಿತ್ತು. ಚಾ.ಸಾ. 13 ರವರಿಗೆ ಮತ್ತು ವಿಠ್ಠಲ ರವರಿಗೆ ಗಾಯಗಳು ಆಗಿದ್ದವು. ನಂತರ ನಾವು ಸಿಂದಗಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ಆ ದಿನ ಟಂ ಟಂ ವಾಹನವನ್ನು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಚಾಲನೆ ಮಾಡುತ್ತಿದ್ದರು. ಕುರಿ ಅಡ್ಡ ಬಂದಿದ್ದರಿಂದ ಅಪಘಾತವಾಗಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದೇನೆ.

**ಸಿಸಿ ನಂ. 1444/2024**

**ಸಿ.ಡಬ್ಲೂ–10 ಪಿ.ಡ್ಲೂ:7**

**(ಈ ಹಂತದಲ್ಲಿ ಸರಕಾರಿ ಸಹಾಯಕರು ಅಭೀಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.**

2. ದಿ.13–12–2023 ರಂದು ಮದ್ಯಾಹ್ನ 2–30 ರಿಂದ 3–00 ಗಂಟೆ ಸುಮಾರಿಗೆ ನಾನು ಮತ್ತು ಚಾ.ಸಾ. 9 ರವರು ಸೇರಿಕೊಂಡು ಜೀಪ್ ನಲ್ಲಿ ಹೊರಟಿದ್ದೇವು ಎಂದರೆ ಸರಿ. ನಾನು ಜೀಪ್ ನ್ನು ನಡೆಸುತ್ತಿದ್ದರು ಎಂದರೆ ಸರಿ. ಯಂಕಂಚಿ ಹಳ್ಳದ ಹತ್ತಿರ ಒಬ್ಬ ಟಂ ಟಂ ಚಾಲಕನು ತನ್ನ ಟಂ ಟಂ ವನ್ನು ಚಾಲನೆ ಮಾಡಿಕೊಂಡುಹ ಹೊಗುತ್ತಿದ್ದಾಗ, ಕುರಿ ಅಡ್ಡ ಬಂದಿದ್ದರಿಂದ, ಅದನ್ನು ತಪ್ಪಿಸಲು ಹೋಗಿ ರಸ್ತೆಯ ಬದಿಯಲ್ಲಿರುವ ತೆಗ್ಗಿನಲ್ಲಿ ಟಂ ಟಂ ವಾಹನವು ಪಲ್ಟಯಾಗಿತ್ತು ಎಂದರೆ ಸರಿ. ಆಗ ನಾನು ಜೀಪ್ ನಿಂದ ಇಳಿದು ನೋಡಲು ಹೊಗಿದ್ದೆ ಎಂದರೆ ಸರಿ.

3. ಅದು ನಮ್ಮ ಊರಿನ ಟಂ ಟಂ ವಾಹನ ಆಗಿತ್ತು ಎಂದರೆ ಸರಿ. ಸದರಿ ಟಂ ಟಂ ನಂ. ಕೆ.ಎ. 28/ಡಿ/7521 ಆಗಿತ್ತು ಎಂದರೆ ನನಗೆ ನೆನಪಿಲ್ಲ. ಟಂ ಟಂ ನಲ್ಲಿದ್ದ ಚಾಸಾ 12 ಮತ್ತು 13 ರವರಿಗೂ ಗಾಯಗಳು ಆಗಿದ್ದವು ಎಂದರೆ ಸರಿ. ಟಂ ಟಂ ನಲ್ಲಿದ್ದ ವಿಠ್ಠಲ ರವರ ತಲೆಗೆ ಭಾರಿ ಗಾಯಗಳು ಆಗಿದ್ದವು ಎಂದರೆ ಸರಿ. ಆತನನ್ನು ವಿಜಯಪುರದ ಬಿ.ಎಲ್.ಡಿ.ಇ. ಆಸ್ಪತ್ರೆಗೆ ಸೇರಿಸುವಾಗ ಆತ ಮರಣ ಹೊಂದಿದ್ದ ಎಂದರೆ ಸರಿ. ಈ ಎಲ್ಲಾ ವಿಷಯವನ್ನು ನಾನು ಪೊಲೀಸರ ಮುಂದೆ

**ಸಿಸಿ ನಂ. 1444/2024**

**ಸಿ.ಡಬ್ಲೂ–10 ಪಿ.ಡ್ಲೂ:7**

ಹೇಳಿದ್ದೇನೆ ಎಂದರೆ ಸರಿ. ಟಂ ಟಂ ಚಾಲಕನು ಅತೀ ವೇಗವಾಗಿ ಮತ್ತು ತನ್ನ ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಟಂ ಟಂ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸಿದ್ದರು ಕೂಡ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಎನ್ ಎಸ್ ಬಿ ಆರೋಪಿ ಪರ ವಕೀಲರಿಂದ**

4. ಅಪಘಾತವಾದಾಗ ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತವಾದ ನಂತರ ನಾನು ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿ. ಆದ್ದರಿಂದ ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಹೇಳಲು ಸಾಧವಾಗುವುದಿಲ್ಲ ಎಂದರೆ ಸರಿ. ಪೊಲೀಸರು ಏನನ್ನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಪಘಾತದ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.
ಸಿಂದಗಿ